## ದೇವೀಸ್ಮರಣೆ

# ಓ ಭವಾನಿ!

ಶಿಕಾರಿಪುರ ಹರಿಹರೇಶ್ವರ



**ಆ**ಚಾರ್ಯ ಶ್ರೀಶಂಕರರು ರಚಿಸಿದ ಸಂಸ್ಕೃತ ಸ್ತೋತ್ರಸಾಹಿತ್ಯದ ಶ್ರೇಣಿಗಳಲ್ಲಿ **ಸೌಂದರ್ಯಲಹರಿ** ಶಿಖರಪ್ರಾಯದಲ್ಲಿದೆ. ಒಂದೊಂದೂ ತನ್ನ ವೈಶಿಷ್ಟ್ಯವನ್ನು ಮೆರೆಯುತ್ತಿರುವ ಈ ನೂರು ಚೌಪದಿಗಳಲ್ಲಿ, ಮೊದಲ ಪ್ರಾಸ್ತಾವಿಕ ಪದ್ಯಗಳ ಬಳಿಕ, ಸುಂದರ ಭಾವದ ಶ್ಲೋಕವೊಂದು ಹೀಗಿದೆ:

ಭವಾನಿ ತ್ವಂ ದಾಸೇ ಮಯಿ ವಿತರದೃಷ್ಟಿಂ ಸಕರುಣಾ–
ಮಿತಿ ಸ್ತೋತುಂ ವಾಂಛನ್ ಕಥಯತಿ ಭವಾನಿ ತ್ವಮಿತಿ ಯಃ ।
ತದೈವ ತ್ವಂ ತಸ್ಮೈ ದಿಶಸಿ ನಿಜಸಾಯುಜ್ಯಪದವೀಂ
ಮುಕುಂದಬ್ರಹ್ಮೇಂದ್ರಸ್ಫುಟಮುಕುಟನೀರಾಜಿತಪದಾಮ್ ॥೨೨॥

'ಅಮ್ಮಾ ದೇವಿ, ನೀನು ನಿನ್ನ ಕರುಣಾಪೂರಿತ ನೋಟವನ್ನು ಈ ದಾಸನ ಮೇಲೆ ಬೀರು!'– ಎಂದು ಹೇಳಲು ಇಚ್ಛೆಸುತ್ತ ಯಾರಾದರೂ 'ಅಮ್ಮಾ ನೀನು .. ..'– ಎಂದೊಡನೆ, ತತ್‌ಕ್ಷಣವೇ ಅವರಿಗೆ ನಿನ್ನೊಡನೆ ಒಂದಾಗಿಬಿಡುವ ಸ್ಥಿತಿಯನ್ನು ಕಾಣಿಸಿಬಿಡುವೆ; ಅದು ಎಂತಹ ಸಾಯುಜ್ಯಪದವಿಯೆಂದರೆ, ದೇವಾಧಿದೇವತೆಗಳು ತಲೆಬಾಗಿ ನಿನಗೆ ನಮಿಸುತ್ತಿದ್ದಾಗ, ಅವರು ಧರಿಸಿರುವ ಕಿರೀಟಗಳು ಯಾವ ಪದಕಮಲಗಳನ್ನು ಆರತಿಯಂತೆ ಬೆಳಗುವುವೋ ಆ ನಿನ್ನ ಪಾದಗಳನ್ನು ಸೇರಿಹೋಗುವಂಥದ್ದು.

ಇಲ್ಲಿ ಆಚಾರ್ಯ ಶ್ರೀಶಂಕರರು ದೇವಿಯನ್ನು ತಾಯಿಯಾಗಿ ಕಾಣುತ್ತಿದ್ದಾರೆ, ಮಗುವಾಗಿ ತನ್ನ ಮತ್ತು ಅವಳ ಸಂಬಂಧವನ್ನು ಕಲ್ಪಿಸಿಕೊಳ್ಳುತ್ತಿದ್ದಾರೆ. ಪ್ರೀತಿಗೆ ಇನ್ನೊಂದು ಹೆಸರೇ ತಾಯಿ– ಎನ್ನುವಷ್ಟರ ಮಟ್ಟಿಗೆ ಆಕೆ ಅಕ್ಕರೆಯ ಮೂರ್ತರೂಪಳಾಗಿದ್ದಾಳೆ. ಮಗುವಿಗೆ ಏನು ಬೇಕು, ಏನನ್ನು ಅದು ಕೇಳುತ್ತದೆ, ಏನನ್ನು ಅದಕ್ಕೆ ಕೊಟ್ಟರೆ ಒಳ್ಳೆಯದು, ಎಷ್ಟು ಕೊಡಬೇಕು, ಹೇಗೆ ಕೊಡಬೇಕು, ಯಾವಾಗ ಕೊಡಬೇಕು – ಹೀಗೆ ಎಲ್ಲ ಪ್ರಶ್ನೆಗಳಿಗೂ, ಆ ಪ್ರಶ್ನೆಗಳು ಹುಟ್ಟುವ ಮೊದಲೇ ಉತ್ತರಗಳನ್ನು ಅಂತಃಕರಣದಲ್ಲಿ ಮನಗಂಡಿರುವವಳು ಮಾತೆ. ಏಕೆಂದರೆ ಆ ಮಗು ಆ ತಾಯಿಯದೇ ಕರುಳ ಕುಡಿ ಅಲ್ಲವೆ? ಮಗು ಹುಟ್ಟಿದ ಸಂಭ್ರಮದ ಸಂಸ್ಕಾರಗಳ ವೇಳೆಯಲ್ಲೇ ಅವಳು ಹೀಗೆ ಹೇಳುವುದಿಲ್ಲವೇ?–

**ಅಂಗಾದ್ ಅಂಗಾದ್ ಸಂಭವಸಿ, ಹೃದಯಾದ್ ಅಧಿಜಾಯಸೇ ।**
**ಆತ್ಮಾ ವೈ ಪುತ್ರನಾಮ ಅಸಿ, ತ್ವಂ ಜೀವ ಶರದಶ್ಶತಮ್ ॥**
**(–ಋಗ್ವೇದೀಯ ಶತಪಥ ಬ್ರಾಹ್ಮಣ ೧೪:೬:೪:೮:೨೬)**

ಅದರ ಅರ್ಥ ಹೀಗಿದೆ:

ನನ್ನಂಗ ಅಂಗಗಳಿಂದ ಒಡಮೂಡಿ ಬಂದಿರುವೆ,
ನನ್ನ ಹೃದಯವೇ ಹೀಗೆ, ನೀ ಹುಟ್ಟನಿಂದೆ;
ನನ್ನಾತ್ಮ ಬೇರಲ್ಲ, ನೀನಲ್ಲದಿನ್ನಿಲ್ಲವೆ, ಮಗುವೆ.
ನೂರ್ಕಾಲ ಬಾಳು ನೀ ಸುಖ ಸಂತೋಷದಿಂದೆ.

ಅಷ್ಟು ಅನ್ಯೋನ್ಯತೆ. ಹೀಗಿದ್ದಾಗ, ಮಗುವಿನ ಬಯಕೆಯೇ ತಾಯಿಯ ಹರಕೆ; ಬರಿಯ ಹಾರೈಕೆಯಲ್ಲ, ಅದರ ಪೂರೈಕೆಯೇ ತಾಯಿಯ ಸಹಜವಾದ ಸ್ವಾಭಾವಿಕ ಆರೈಕೆ.

ಹೀಗಿದ್ದಾಗ, ತನಗೆ ಏನು ಬೇಕು ಎಂದು ಮಗು ತಾಯಿಗೆ ಹೇಳಬೇಕಿಲ್ಲ, ಎಲ್ಲವನ್ನೂ ವಿವರಿಸಲೂ ಬೇಕಿಲ್ಲ; ಸಾಂಕೇತಿಕವಾಗಿ ಸೂಚನೆ ಕೊಟ್ಟರೆ ಸಾಕು. ಮುಖಚರ್ಯೆಯೋ, ಚಲನವಲನವೋ, ಅಳುವೋ ಮಂದಹಾಸವೋ, ನಗುವೋ – ಕೇವಲ ಕುರುಹುಗಳೇ ಸಾಕಲ್ಲವೇ? "ಅಮ್ಮಾ, ನನಗೆ .. .. " ಎಂದು ಒಂದೆರಡು ಪದಗಳನ್ನು ತೊದಲಿದರೆ ಸಾಕು, ತಾಯಿಗೆ ಎಲ್ಲಾ ಅರ್ಥವಾಗಿ ಹೋದೀತು.

ತನ್ನ ಮಗು ಚೂಟಿಯಾದ ಮಗುವಾಗಿರಬೇಕು, ಬುದ್ಧಿವಂತಿಕೆಯಲ್ಲಿ ಎಲ್ಲರನ್ನೂ ಮೀರಿಸಿರಬೇಕು, "ಜಾಣ ಮಗುವೆಂದರೆ ತನ್ನದೇ **(ವೇದೋ ವೈ ಪುತ್ರನಾಮ ಅಸಿ!)**" – ಎಂದೆಲ್ಲ ಹೆತ್ತವಳ ಆಕಾಂಕ್ಷೆ. ಅಣುಗನೋ ಅಣುಗೆಯೋ, ಅಷ್ಟು ತೀಕ್ಷ್ಣಬುದ್ಧಿಯ ತನ್ನ ಪ್ರೀತಿಪಾತ್ರವಾದ ಮಗು ಆಡಿಯೇ ಕೇಳಬೇಕೆಂದಿಲ್ಲ, ಸನ್ನೆ ಮಾಡಿ ತಿಳಿಸಿಬಿಡುವ ಚಾಕಚಕ್ಯತೆಯುಳ್ಳದ್ದೆಂದು ಎಲ್ಲ ತಾಯಂದಿರ ಹುಸಿನಂಬಿಕೆ. ಕೆಲವರು ಪುಣ್ಯವಂತರ ಪಾಲಿಗೆ ಇದು ಹುಸಿಯೂ ಆಗಿರುವುದಿಲ್ಲ. ಅಂಥದೊಂದು ಸನ್ನಿವೇಶವನ್ನು ಇಲ್ಲಿ ಶ್ರೀಶಂಕರರು ಕಲ್ಪಿಸಿಕೊಳ್ಳುತ್ತಿದ್ದಾರೆ.

---

ಲೇಖಕರು ಅಮೆರಿಕದಲ್ಲಿ ಬಹಳ ವರ್ಷ ತಂಗಿದ್ದು, ಅಲ್ಲಿನ ಕನ್ನಡಿಗರ ಸಂಘಟನೆಯಲ್ಲಿ ತೊಡಗಿದ್ದರು; ವೃತ್ತಿಯಲ್ಲಿ ಇಂಜನಿಯರ್ ಆಗಿದ್ದರೂ ಪ್ರವೃತ್ತಿಯಲ್ಲಿ ಸಾಹಿತ್ಯಾಭ್ಯಾಸಿಗಳು; ಪ್ರಸ್ತುತ ಮೈಸೂರು ನಿವಾಸಿಗಳು.

'ಅಮ್ಮಾ, ನನ್ನ ಮೇಲೆ ನಿನ್ನ ಕರುಣಾಕಟಾಕ್ಷವನ್ನು ಬೀರು, ದಯೆತೋರು' – ಎಂದು ಕೃಪಾಭಿಕ್ಷೆಯನ್ನು ಕೇಳಿಕೊಳ್ಳುವ ಸಂದರ್ಭ ಇದು. ಅನ್ನಪೂರ್ಣೆ, ಸದಾಪೂರ್ಣೆ, ಶಂಕರನ ಪ್ರಾಣವಲ್ಲಭೆಯಾದ ಪಾರ್ವತಿಯನ್ನು ಶ್ರೀಶಂಕರರು ಬೇಡಿಕೊಳ್ಳುತ್ತಿರುವ ಭಿಕ್ಷೆ ಕೇವಲ ಜ್ಞಾನವೈರಾಗ್ಯದ ಸಿದ್ಧಿ. ಅದಕ್ಕಾಗಿ, ಪುರುಷಪ್ರಯತ್ನದ ಸಾಧನೆ ಎಷ್ಟೇ ಸಮೃದ್ಧವಾಗಿರಲಿ, ಎಲ್ಲದಕ್ಕೂ ದೈವಾನುಗ್ರಹ ಬೇಕೇ ಬೇಕು.

**ಬೇಡಿದ್ದ ನೀಡುವಳೆ, ಕೇಳಿದ್ದ ಕೊಡುವವಳೆ,**
**ನೀನಲ್ಲದಿನ್ನಾರು ನನ್ನ ಹೊಣೆ ಹೊರೆವ ಬಂಧು?**
**ದಯೆ ಕರುಣೆ ಅಕ್ಕರೆಯ ಜೇನ ಸವಿ ಮಮತೆಗಳ**
**ತೊನಲುಗಳು ಕೂಡಿ ಸೇರಿದ ಸುಧೆಯ ಸಿಂಧು!**

–ಎನ್ನುವುದೇ ತಾಯಿಯಲ್ಲಿ ಮಕ್ಕಳ ಬಿನ್ನಹ.

### ಶ್ರೀರಾಮಕೃಷ್ಣರ ಪ್ರಾರ್ಥನೆ

**"ಹೇ ದಿವ್ಯಜನನಿ, ನನಗೆ ಜನರಿಂದ ಕೀರ್ತಿ ಬೇಡ! ನನಗೆ ದೇಹದ ಸುಖಾಭಿಲಾಷೆ ಬೇಡ! ಗಂಗಾ-ಯಮುನಾ ನಿತ್ಯ ಸಂಗಮದಂತೆ ನನ್ನ ಹೃದಯ ನಿನ್ನೆಡೆಗೆ ಹರಿಯಲಿ. ಹೇ ಜನನಿ!, ಭಕ್ತಿಹೀನ ನಾನು, ಯೋಗಹೀನ ನಾನು, ನನ್ನವರೆಂಬುವವರಿಲ್ಲ. ನನಗೆ ಯಾರ ಹೊಗಳಿಕೆಯೂ ಬೇಕಾಗಿಲ್ಲ. ನನ್ನ ಮನಸ್ಸು ಮಾತ್ರ ನಿನ್ನ ಪಾದಪದ್ಮಗಳಲ್ಲಿ ಯಾವಾಗಲೂ ನೆಲೆಸಲಿ... ಹೇ ತಾಯಿ! ನಾನು ಯಂತ್ರ, ನೀನು ಯಂತ್ರಿ; ನಾನು ಕೊಠಡಿ, ನೀನು ಅದರಲ್ಲಿರುವವಳು; ನಾನು ಒರೆ, ನೀನು ಕತ್ತಿ; ನಾನು ರಥ, ನೀನು ರಥಿ; ನೀನು ಮಾಡಿಸಿದಂತೆ ನಾನು ಮಾಡುವೆನು. ನೀನು ಪ್ರೇರೇಪಿಸಿದಂತೆ ನಾನು ಮಾತನಾಡುವೆನು. ಅಂತ-ರ್ಯಾಮಿಯಾದ ನೀನು ಚಲಿಸಿದಂತೆ ನಾನು ಚಲಿಸುವೆನು."**

ಆಚಾರ್ಯ ಶಂಕರರಿಗಂತೂ ತಾಯಿಯೆಂದರೆ ಎಲ್ಲಿಲ್ಲದ ಪ್ರೀತಿ, ಗೌರವ, ಭಕ್ತಿ ಮತ್ತು ಪೂಜ್ಯಭಾವನೆ. ತಮ್ಮ ಸಂನ್ಯಾಸಿಧರ್ಮಕ್ಕೆ ಹೊರತೋರಿಕೆಗೆ ವಿರುದ್ಧವೆಂದು ಕಂಡುಬರುತ್ತಿದ್ದರೂ ಅದನ್ನು ಲೆಕ್ಕಿಸದೆ, ಪೂರ್ವಾಶ್ರಮದ ಬಂಧುಗಳ ಕೆಂಗಣ್ಣಿಗೆ ಗುರಿಯಾದರೂ ಆ ಬಗ್ಗೆ ಚಿಂತಿಸದೆ, ಹೆತ್ತ ತಾಯಿಗೆ ತಮ್ಮ ಬಾಲ್ಯದಲ್ಲಿ ಕೊಟ್ಟ ಮಾತನ್ನು ತಪ್ಪದೇ ನಡೆಸಿಕೊಡುವ ಸಲುವಾಗಿ, ಅವಳ ಅಂತ್ಯಕಾಲದಲ್ಲಿ ಅವಳ ಬಳಿಗೆ ಹೋಗಿ, ದರ್ಶನ ಪಡೆದು, ತಾಯಿಯ ಅಂತ್ಯಕ್ರಿಯೆಗಳನ್ನು ತಾವೇ ನಡೆಸಿದವರು ಅವರು. ಈ ಐತಿಹ್ಯದ ಸತ್ಯಾಸತ್ಯತೆಯ ಬಗ್ಗೆ ಸಂಶೋಧನೆ ಅತ್ತ ಇರಲಿ, ಹೀಗೊಂದು ಸನ್ನಿವೇಶವನ್ನು ಮಾತೃಪ್ರೇಮಿಯಾದ ಶ್ರೀಶಂಕರರು ಮಾನವೀಯತೆಯ ದೃಷ್ಟಿಯಿಂದ ಎದುರಿಸಿದರು – ಎಂಬುದೊಂದೇ ಸಾಕು, ಶಂಕರವಿಜಯದ ದುಂದುಭಿ ಮೊಳಗುವುದಕ್ಕೆ.

ಈ ಶ್ಲೋಕವನ್ನು ರಚಿಸುವ ಸಂದರ್ಭದಲ್ಲಿಯೂ, ಶಂಕರಾಚಾರ್ಯರು ಕಾಲಟಿಯ ತಮ್ಮ ಹೆತ್ತಮ್ಮನನ್ನು ನೆನೆಸಿಕೊಳ್ಳುತ್ತಿದ್ದಾರೇನೋ. ಅವಳಿಂದಲೇ ಬಂದ ಮಗುವಿಗೆ, ಅವಳೊಡನೆಯೇ ಸೇರಿ ಒಂದಾಗುವ ಮಹತ್ವಾಕಾಂಕ್ಷೆ. ಹೋಗಿ ಸೇರುವ ಬೆಟ್ಟದ ಕಡಿದಾದ ಹಾದಿಯಲ್ಲಿ ನಾಲ್ಕು ಮುಖ್ಯ ಮೆಟ್ಟಿಲುಗಳು: **ಸಾಲೋಕ್ಯ, ಸಾಮೀಪ್ಯ, ಸಾನ್ನಿಧ್ಯ** ಮತ್ತು ಕೊನೆಯ ಸೋಪಾನವಾದ **ಸಾಯುಜ್ಯ**. ನಮ್ಮ ಇಷ್ಟದೇವತೆಯೊಡನೆ ಸೇರಿ ಒಂದಾಗುವ ಈ ಮಜಲೇ ಕಟ್ಟಕಡೆಯದು. ಹಾಗೆ ಒಂದಾದರೂ, ಶಂಕರರೇ ಬೇರೊಂದು ಕಡೆ (ವಿಷ್ಣುಷಟ್ಪದಿ, ३) ಹೇಳಿರುವಂತೆ, **ಭಕ್ತ ಭಕ್ತಿ ಭಗವಂತ** – ಇವುಗಳಲ್ಲಿ ಭೇದಗಳು ಮರೆಯಾದರೂ, 'ಸಮುದ್ರದಿಂದ ಅಲೆಗಳೇ ಹೊರತು, ಅಲೆಗಳಿಂದ ಸಮುದ್ರವಲ್ಲ **(ಸಾಮುದ್ರೋ ಹಿ ತರಂಗಃ, ಕ್ವಚನ ಸಮುದ್ರೋ ನ ತಾರಂಗಃ)**'. **ತಾರೆಗಳು ತುಂಬಿ ಮಿನುಗುತಲೆ ಇರಬಹುದು, ನಕ್ಷತ್ರಗೇ ಆಕಾಶವಲ್ಲ** – ಈ ಭಾವ ಮರೆಯಾಗದೆಂದೆಂದೂ.

ತಾಯಿಯ ಅಡಿದಾವರೆಗಳಲ್ಲಿ ಒಂದಿನಿತು ಎಡೆ ಸಿಕ್ಕರೆ ಸಾಕು, ನನ್ನಾಸೆ ಈಡೇರಿತು, ನನ್ನ ಜನ್ಮ ಸಾರ್ಥಕವಾಯಿತು– ಎಂದುಕೊಳ್ಳುತ್ತಾನೆ ಭಕ್ತ. ಅಂಥಿಂಥ ಪಾದಪದ್ಮಗಳಲ್ಲ ಅವು! ಇಂದ್ರ ಬ್ರಹ್ಮ ವಿಷ್ಣು ಮೊದಲಾದ ಸುರಾಸುರರೂ ತಲೆಬಾಗಿ ಆ ಪಾದಗಳಿಗೆ ನಮಸ್ಕರಿಸುತ್ತಿದ್ದಾರೆ. ಹಾಗೆ ಅವರು ಮಣಿದಾಗ, ಅವರು ತಲೆಯಲ್ಲಿ ಧರಿಸಿರುವ ಹೊಳೆಹೊಳೆವ ರತ್ನಖಚಿತ ಕಿರೀಟಗಳು ಪ್ರತಿಫಲಿಸುತ್ತಿರುವ ಬೆಳಕೇ ದೇವಿಯ ಪಾದಗಳಿಗೆ ಆರತಿ ಎತ್ತುತ್ತಿವೆಯೇನೋ ಎನ್ನಿಸುತ್ತಿದೆ.

ಕವಿಯಾಗಿ ಶಂಕರರು ಬಳಸುವ ಪದಗಳ ಆಯ್ಕೆಯ ವೈಶಿಷ್ಟ್ಯವನ್ನು ಗಮನಿಸಬೇಕು. ದೇವಿಗೆ ನೂರೆಂಟು ಹೆಸರು. ಉಮಾ, ಕಾತ್ಯಾಯಿನೀ, *ಗೌರೀ, ಕಾಲೀ, ಹೈಮವತೀ, ಈಶ್ವರೀ, ಶಿವಾ, ಭವಾನೀ, ರುದ್ರಾಣೀ, ಶರ್ವಾಣೀ, ಸರ್ವಮಂಗಳಾ, ಅಪರ್ಣಾ, ಪಾರ್ವತೀ, ದುರ್ಗಾ, ಮೃಡಾಣೀ, ಚಂಡಿಕಾ, ಅಂಬಿಕಾ, ಆರ್ಯಾ, ದಾಕ್ಷಾಯಣೀ, ಗಿರಿಜಾ, ಮೇನಕಾತ್ಮಜಾ* – ಯಾವುದಾದರೂ ಆಗಬಹುದಿತ್ತು. ನಾಲ್ಕೇ ಮಾತ್ರೆಗಳ ಪದವೊಂದರ ಅವಶ್ಯಕತೆ ಇತ್ತೆನಿಸಿದ್ದರೆ ರುದ್ರಾಣಿ, ಶರ್ವಾಣಿ, ಮೃಡಾಣಿ – ಹೀಗೆ ಏನಾದರೊಂದನ್ನು ಆರಿಸಿಕೊಳ್ಳಬಹುದಿತ್ತು. ಆದರೆ, ಅವನ್ನೆಲ್ಲ ಬಿಟ್ಟು, 'ಭವಾನಿ'ಯೇ ಏಕೆ ಬೇಕಿತ್ತು? ಇಲ್ಲೊಂದು ಚಮತ್ಕಾರ ಇದೆ. ಸ್ವಲ್ಪ ಕ್ಲಿಷ್ಟ ಸಂಸ್ಕೃತದ ವ್ಯಾಕರಣದ ವಿಚಾರವಾದ್ದರಿಂದ ಇದನ್ನು ಲೇಖನದ ಕೊನೆಗೆ ನೋಡೋಣ.

**'ದಾಸ'** ಪದವನ್ನು ಗಮನಿಸಿ: ಭಕ್ತಿ ಒಂಬತ್ತು ವಿಧ ಎಂದು ಭಾಗವತ (೭:೫:೨೩) ಹೇಳುತ್ತದೆ: **ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ, ಆತ್ಮನಿವೇದನ** ಎಂದು. ಆತ್ಮಸಮರ್ಪಣ ಭಾವ ಅಂದರೆ, ಭಗವಂತನಲ್ಲಿ ಸಂಪೂರ್ಣವಾಗಿ ಒಪ್ಪಿಸಿಕೊಂಡಿರುವ ಭಾವನೆ ಈ ಶ್ಲೋಕದಲ್ಲಿ ಸೂಚಿತವಾಗಿದೆ. ಪ್ರಪತ್ತಿಯೆಂದರೆ ಇದೇ. ಭಗವಂತನಿಗೆ ಗೊತ್ತು – ಭಕ್ತನಿಗೆ ಏನು, ಹೇಗೆ ಯಾವಾಗ ಎಷ್ಟು ಬೇಕು ಅಂತ. "ಏನೂ ಅರಿಯದವನು; ನಿನ್ನ ಮಡಿಲಿಗೆ ಹಾಕಿರುವೆ. ಹಾಲಲ್ಲಾದರೂ ಮುಳುಗಿಸು, ನೀರಿಗಾದರೂ ಹಾಕು!" – ಎಂದು ಕೇಳಿಕೊಳ್ಳುವುದೇ ಸಾಕು. "ಅನನ್ಯತೆಯಿಂದ ದೇವರೊಬ್ಬನನ್ನೇ ಚಿಂತಿಸುವ, ಅವನನ್ನೇ ಉಪಾಸಿಸುವ ಜನರ ಯೋಗಕ್ಷೇಮವನ್ನು ದೇವರು ತಾನೇ ಹೊರುತ್ತಾನೆ!" ಎಂಬ ಭಗವದ್ಗೀತೆಯ ಮಾತು (೯:೨೨) ಇಲ್ಲಿ ಪ್ರಸ್ತುತ.

**ವಾಂಛೆ** : ಅಪೇಕ್ಷೆ, ಅಭಿಲಾಶೆ, ಅಭೀಪ್ಸೆ, ಆಮಿಷ, ಆಶಯ, ಇಚ್ಛೆ, ಈಪ್ಸೆ, ಕಾಮನೆ, ಮನೋರಥ, ಲಾಲಸೆ, ಲಿಪ್ಸೆ– ಈ ಯಾವ

ಸಂಸ್ಕೃತ ರೂಪವೂ ಇಲ್ಲಿ ಪ್ರಯೋಗಿಸಿರುವ **ವಾಂಛೆ** ಎನ್ನುವ ಪದಕ್ಕೆ ಸರಿದೂಗದು. ಇದೇ ಬೇಕು – ಎಂಬ ಮಗುವಿನ ಮನಸ್ಸಿನ ತೀಕ್ಷ್ಣವಾದ, ಹಠದ ಬಯಕೆಯೇ **ವಾಂಛೆ**. ಬೇಕಾದ್ದನ್ನು ಗಿಟ್ಟಿಸಿ ಕೊಳ್ಳುವ ರಂಪಾಟದ ಸೂಕ್ಷ್ಮ ಹೆಜ್ಜೆಗುರುತುಗಳು ಈ ಪದದಲ್ಲಿವೆ.

**ತದೈವ:** ತತ್‌ಕ್ಷಣ, ಒಡನೆಯೇ, ವಾಕ್ಯವನ್ನು ಪೂರ್ಣವಾಗಿ ಹೇಳಿ ಮುಗಿಸುವುದರೊಳಗಾಗಿ ತಾಯಿ ಮಗುವಿನ ಇಂಗಿತವನ್ನು ಅರಿತುಕೊಳ್ಳುತ್ತಾಳೆ. ಅವಳು ಇಂಗಿತಜ್ಞೆ. ತೊದಲುನುಡಿಯಲ್ಲೇ ಶಿಶು ಜಲ್ಪಿಸಬಹುದು, ಅದಕ್ಕೊಂದು ಭಾಷಾಂತರಕೋಶ ಸದಾ ತಾಯಿಯ ಮಿದುಳಿನಲ್ಲಿ ಸಿದ್ಧವಾಗಿರುತ್ತದೆ. ಇಂತಹ ಆರಂಭಾಕ್ಷರಿ ಪಂದ್ಯದಲ್ಲಿ ಯಾವಾಗಲೂ ತಾಯಿಯದೇ ಗೆಲುವು. ಏಕೆಂದರೆ, ಮಗುವಿನ ಇಂಗಿತವನ್ನು ಅರಿಯುವುದೊಂದೇ ತಡ, ಕ್ಷಣಾರ್ಧದಲ್ಲಿ ಅದನ್ನು ಅವಳು ಪೂರೈಸಿಬಿಡುತ್ತಾಳೆ.

**ದಿಶಸಿ:** ದಿಶಸಿ ಅಂದರೆ, ಕಾಣಿಸಿಬಿಡುತ್ತೀಯೆ; ಕೊಡುವುದಲ್ಲ ನೀಡುವುದಲ್ಲ, ಬೇಡುವವನಿಗೆ ಕಾಣಿಸುವುದು. ಭಕ್ತ ತಾನೇ ಅನುಭವಿಸುವಂತೆ, ಅವನಿಗೆ ಕಾಣ್ಕೆಯನ್ನು ದಯಪಾಲಿಸುವುದು.

ಈಗ ಕಾದಿರಿಸಿರುವ 'ಭವಾನಿ'ಯ ಪದ ಚಮತ್ಕಾರದ ಬಗ್ಗೆ ನಾಲ್ಕು ಮಾತು. ಸ್ವಲ್ಪ ಕ್ಲಿಷ್ಟವೆನಿಸಿದರೆ, ಬಿಟ್ಟುಬಿಡಿ. ಸಂಸ್ಕೃತದಲ್ಲಿ ಪದಗಳಿಗೆ ನಾನಾರ್ಥಗಳುಂಟು. ನಾಮಪದವಾದಾಗ ಭವಾನಿ ಎಂದರೆ **ಪಾರ್ವತಿ** ಎಂದೂ, ಕ್ರಿಯಾಪದವಾದಾಗ ಅದಕ್ಕೆ *'[ನಾನು] ಆಗ ಬೇಕು, ಆಗುವ ಅಕಾಂಕ್ಷೆ ಇದೆ, ಆಗಲೆಂಬ ಪ್ರಾರ್ಥನೆ ಸಲ್ಲಿಸುತ್ತೇನೆ'*– ಇತ್ಯಾದಿ ಅರ್ಥಗಳು ಇವೆ. *ಶುಭಂ ಭವತು* ([ನಿಮಗೆ] ಒಳ್ಳೆಯದು ಆಗಲಿ)– ಎಂಬುದನ್ನು ಕೇಳಿದ್ದೀರಿ. *ಸರ್ವೇ ಸುಖಿನ: ಭವನ್ತು* ([ಅವರಿವರು] ಎಲ್ಲರೂ ಸುಖಿಗಳು ಆಗಿರಲಿ), *ದೀರ್ಘ ಆಯುಷ್ಮಾನ್ ಭವ* (ಹೆಚ್ಚು ಆಯುಸ್ಸುಳ್ಳವನು [ನೀನು] ಆಗು)– ಇಂಥ ಹಾರೈಕೆಗಳನ್ನೂ ಕೇಳಿದ್ದೀರಿ. ಇಲ್ಲಿನ ಭವತು ಮುಂತಾದ ಕ್ರಿಯಾಪದಗಳು 'ಭೂ' ಎಂಬ ಧಾತುವಿನ ಆಜ್ಞೆ, ಆಮಂತ್ರಣ, ಪ್ರಾರ್ಥನೆ, ಹಾರೈಕೆಗಳ ಗುಂಪಿನ ಭವಿಷ್ಯತ್ ಕ್ರಿಯಾರೂಪಗಳು. **ನಾನು ಆಗಬೇಕು– ಎಂಬುದಕ್ಕೆ 'ಭೂ' ಧಾತುವಿನ ಸಂಸ್ಕೃತ ಕ್ರಿಯಾಪದ 'ಭವಾನಿ'– ಎಂದು.** [ಖಚಿತವಾಗಿ 'ನಾನು ಆಗುವೆನು'– ಎಂಬುದಕ್ಕೆ ಭವಿಷ್ಯಾಮಿ ಎಂಬ ಇನ್ನೊಂದು ಭವಿಷ್ಯತ್ ಕಾಲದ ರೂಪ ಇದೆ. ಅದು ಬೇರೆ.]

'ನಾನು ನೀನೇ ಆಗಬೇಕು', ಅಂದರೆ ನಾನೂ ನೀನೂ ಒಂದಾಗ ಬೇಕು, ನಿನ್ನಲ್ಲಿ ಸೇರಿಬಿಡಬೇಕು, ನನಗೆ ಸಾಯುಜ್ಯಪದವಿ ಸಿಗಬೇಕು– ಎಂದೆಲ್ಲ ಅರ್ಥ ಬರುವಂತೆ 'ಭವಾನಿ ತ್ವಮ್'– ಎಂಬ ಪದ ಯುಗಳ ಪ್ರಯೋಗವನ್ನು ಚಾತುರ್ಯದಿಂದ ಅದ್ವೈತ ಪ್ರತಿಪಾದಕ ಕವಿ ಇಲ್ಲಿ ಮಾಡಿದ್ದಾರೆ. ಈ ನಾರಿಕೇಳಪಾಕದ ಸೊಗಸು ಸವಿಯುವುದಕ್ಕೆ ನಾವು ತಕ್ಕಷ್ಟು ಸಂಸ್ಕೃತ ಅಧ್ಯಯನ ಮಾಡಿದರೆ ಚೆನ್ನ.

**ಒಟ್ಟಾರೆ, "ತನ್ನ ಮಗುವಿನ ಮನದಿಂಗಿತವನ್ನು ಸ್ವಾಭಾವಿಕವಾಗಿ ಅರಿಯುವ ಯಾವ ತಾಯಿಯಾದರೂ ಅದಕ್ಕೆ ಏನು ಬೇಕೆಂಬುದನ್ನು ಕ್ಷಣಾರ್ಧದಲ್ಲಿ ಅರಿತು ಅದರ ಬಯಕೆಯನ್ನು ಈಡೇರಿಸುವಂತೆ, ನಿನ್ನನ್ನು 'ಕಾಣುವ' ನನ್ನ ಇಷ್ಟಾರ್ಥವನ್ನು, ಓ ಜಗನ್ಮಾತೆಯೇ, ನಾನು ಕೇಳುವ ಮೊದಲೇ ಪೂರೈಸು" ಎಂದು ಕಳಕಳಿಯಿಂದ ಶ್ರೀಶಂಕರರು ಇಲ್ಲಿ ಕೇಳಿಕೊಳ್ಳುತ್ತಿದ್ದಾರೆ. ಮಗುವಿನ ಮನಸ್ಸಿನ ಭಕ್ತರೆಲ್ಲರಿಗೂ ತಾಯಿಯ ದರ್ಶನ ಸಿಕ್ಕೇ ಸಿಗುತ್ತದೆ!**

✪

## ಭಗವಂತನನ್ನು ಅರಸುತ್ತ

ಸ್ವಾಮಿ ಯತೀಶ್ವರಾನಂದ

### ಸಾಧನೆಯಲ್ಲಿ ಸಂತೋಷದ ಅನುಭವ

ಗುರುವು ಭಕ್ತನಿಗೆ ಉಪದೇಶವನ್ನು ನೀಡುವನು; ಆಧ್ಯಾತ್ಮಿಕ ಜೀವನದ ವಿವಿಧ ಹಂತಗಳನ್ನು ಬೋಧಿಸುವನು; ಮಾರ್ಗದರ್ಶನ ಮಾಡಿ ಗುರಿಯತ್ತ ಕೊಂಡೊಯ್ಯುವನು. ಸಾಧಕನು ಪರತತ್ತ್ವವನ್ನು ಸಾಕ್ಷಾತ್ಕರಿಸಿಕೊಂಡಾಗ, ಅವನ ಸಂಶಯಗಳೆಲ್ಲ ನಾಶವಾಗುವವು. ಸಾಧನೆಯ ಸಮಯದಲ್ಲಿ, ಸಾಧಕನು ವಿವಿಧ ಬಗೆಯ ಆಧ್ಯಾತ್ಮಿಕ ಅನುಭವಗಳನ್ನು ಪಡೆದುಕೊಳ್ಳುತ್ತಾನೆ. ಅವನು ದೇವತಾರೂಪದ ಅನೇಕ ದರ್ಶನಗಳನ್ನು ಹೊಂದಬಹುದು. ಆದರೆ ಅಲ್ಲಿಗೆ ಅವನು ನಿಲ್ಲಬಾರದು; ಮುಂದುವರಿದು ಸರ್ವವ್ಯಾಪಕವಾದ ಪರಬ್ರಹ್ಮನೊಡನೆ ಒಂದಾಗಬೇಕು: ಎಲ್ಲ ಸಂಶಯಗಳೂ ನಾಶವಾಗುವ ಅತ್ಯುನ್ನತ ಸ್ಥಿತಿ ಅದು.

ಮನಸ್ಸನ್ನು ಜಪ ಮತ್ತು ಧ್ಯಾನಗಳ ಅಭ್ಯಾಸದಿಂದ ಪವಿತ್ರಗೊಳಿಸಬೇಕು. ಈ ಬಗೆಯ ಅಭ್ಯಾಸದಿಂದ ದೇಹವು ಪರಿಶುದ್ಧವಾಗುವುದು; ಚಿಕ್ಕಪುಟ್ಟ ವ್ಯಾಧಿಗಳು ನಮ್ಮನ್ನು ಬಾಧಿಸುವುದಿಲ್ಲ. ಹಾಗೆಯೇ ಮಾನಸಿಕ ಶಕ್ತಿಸಂಪನ್ನರಾಗುವೆವು; ಹೃದಯವೂ ವಿಶಾಲಗೊಳ್ಳುವುದು. ಆಗ, ನಾವು ನಮ್ಮ ಅಂತರಂಗದಲ್ಲಿರುವ ದಿವ್ಯತೆಯ ಜೊತೆಗೆ ಹೆಚ್ಚು ಹೆಚ್ಚು ಸಂಪರ್ಕಕ್ಕೆ ಬರುವೆವು. ಸತ್ಯವು ತಾನೇ ತಾನಾಗಿ ನಮ್ಮೊಳಗಿನಿಂದ ಪ್ರಕಟಗೊಳ್ಳುವುದು. ಮೂಕನೊಬ್ಬನು ತಾನು ಸವಿದ ಸಿಹಿಯ ಬಗ್ಗೆ ಯಾರಿಗೂ ಹೇಳಲಾರನಷ್ಟೆ. ಆಧ್ಯಾತ್ಮಿಕ ಜಾಗೃತಿಯೂ ಅದೇ ರೀತಿ. ಇದೇ ಪರೀಕ್ಷೆ – ಈ ದಿವ್ಯತೆಯ ಸಂಪರ್ಕ ಹೊಂದಿದ ಹಾಗೆಲ್ಲ, ಸಾಧಕನು ತನ್ನೊಳಗೇ ಅವ್ಯಕ್ತ ಆನಂದವನ್ನು ಭಾವಿಸುವನು.

ಧ್ಯಾನಕ್ಕೆ, ಸಂಶಯ, ಅಸೂಯೆ, ಮನಸ್ಸಿನ ಚಂಚಲತೆ ಮೊದಲಾದ ಹಲವು ಅಡೆತಡೆಗಳಿರುತ್ತವೆ. ಅವುಗಳಲ್ಲಿ ಸಂಶಯವು ಬಹು ದೊಡ್ಡ ಅಡ್ಡಿಯಾಗಿದೆ. ಅದನ್ನು ನಿವಾರಿಸಿ, ಸಂಪೂರ್ಣ ಶ್ರದ್ಧೆಯನ್ನು ನಾವು ಬೆಳೆಸಿಕೊಳ್ಳಬೇಕು. ಪ್ರಾಪಂಚಿಕ ವಿಷಯಗಳನ್ನು ಕುರಿತ ಮಾನಸಿಕ ಚಂಚಲತೆಯನ್ನೂ ನಿವಾರಿಸಿಕೊಳ್ಳಬೇಕು. ಭಗವಂತನ ಸಾಕ್ಷಾತ್ಕಾರಕ್ಕಾಗಿ ವ್ಯಾಕುಲರಾಗುವುದು ನಿಜವಾಗಿಯೂ ಒಂದು ಅನುಗ್ರಹವೇ ಆಗಿದೆ. ಆದರೆ ಅದು ಬರುವುದು ಬಹಳ ವಿರಳ. ನಾವು ಯಾವಾಗಲೂ ಜಾಗೃತರಾಗಿರಬೇಕು, ನಮ್ಮ ಭಾವೋದ್ರೇಕಗಳನ್ನು ಭಗವತ್ಸಾಕ್ಷಾತ್ಕಾರಕ್ಕಾಗಿನ ವ್ಯಾಕುಲತೆಯೆಂದು ತಪ್ಪಾಗಿ ತಿಳಿಯಬಾರದು.

ಆಧ್ಯಾತ್ಮಿಕ ಸಾಧನೆಯಲ್ಲಿ ನಮಗೆ ರುಚಿ ಒಮ್ಮೆಗೇ ಬರುವುದಿಲ್ಲ. ಅದಕ್ಕಾಗಿ ನಾವು ಬಹಳ ಪ್ರಯತ್ನಪಡಬೇಕು. ನಮ್ಮ ಶಕ್ತಿಯನ್ನೆಲ್ಲ ಅದಕ್ಕಾಗಿಯೇ ವ್ಯಯಿಸಬೇಕು. ಸ್ವಲ್ಪಕಾಲದ ನಂತರ ನೀವು ಪ್ರಗತಿಯನ್ನು ಕಾಣುವಿರಿ, ಆದರೆ ಅದರಲ್ಲಿಯೇ ತೃಪ್ತರಾಗಬೇಡಿ. ಪರತತ್ತ್ವವನ್ನು ಸಮೀಪಿಸುವವರೆಗೂ ತೀವ್ರ ಅತೃಪ್ತಿಯನ್ನು ಕಾಯ್ದುಕೊಂಡು ಬನ್ನಿ. ಶ್ರೀರಾಮಕೃಷ್ಣರು ಜಗನ್ಮಾತೆಗೆ ಮೊರೆಯಿಡುತ್ತಿದ್ದರು, "ಅಮ್ಮಾ, ಮತ್ತೊಂದು ದಿನ ಕಳೆದುಹೋಯಿತು. ನಿನ್ನ ದರ್ಶನ ನನಗೆ ಆಗಲಿಲ್ಲ." ಇದು ನಿಜವಾದ ಆಧ್ಯಾತ್ಮಿಕ ವ್ಯಾಕುಲತೆ.

✪

(ಮುಂದಿನ ತಿಂಗಳು: ಪ್ರಾಪಂಚಿಕ ಸನ್ನಿವೇಶಗಳ ನಡುವೆಯೂ ಆನಂದದ ಅಭ್ಯಾಸ)